ಸ್ಥಾಪನೆ ಮಾಡುವುದರಿಂದ ನಮಗೆ ಅನೇಕ ರೀತಿಯ ಸಮಸ್ಯೆಗಳು ಬರುತ್ತವೆ. ತುಮಕೂರಿನಲ್ಲಿ ಕೂಡ ಅದೇ ರೀತಿಯಾಗಿದೆ. ಬೃಹತ್ ಕೈಗಾರಿಕೆಗಳು ಅಂದರೆ ಸುಮಾರು 200-300 ಎಕರೆಗಳಲ್ಲಿ ಬರತಕ್ಕಂತಹ ಕೈಗಾರಿಕೆಗಳನ್ನು ಶಿರಾಕ್ಕೆ ಕಳಿಸತಕ್ಕಂತಹ ಕೆಲಸ ಮಾಡಿದರೆ ಒಳ್ಳೆಯದು. ಅಲ್ಲಿ ಲ್ಯಾಂಡ್ ಅವೈಲಬಲಿಟಿ ಸಾಕಷ್ಟು ಇದೆ. ಫಲವತ್ತಾಗಿರತಕ್ಕಂತಹ ಜಮೀನು ಅಲ್ಲವೇ ಅಲ್ಲ. ಸ್ಕ್ಯಾಂಟಿ ರೈನ್‌ಫಾಲ್ ಇರತಕ್ಕಂತಹ ಪ್ರದೇಶ ಅದು ಆಗಿದೆ. ಅಲ್ಲಿ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. ಎಲ್ಲ ಕೈಗಾರಿಕೆಗಳನ್ನು ಕೂಡ ಇಂಟೀರಿಯರ್ ಪಾರ್ಟ್ ಆಫ್ ದಿ ಕರ್ನಾಟಕದಲ್ಲಿ ನೀವು ಹೆಚ್ಚು ಪಂಪಿಂಗ್ ಮಾಡುವುದರಿಂದ ಹೆಚ್ಚು ಲಾಭ ಕರ್ನಾಟಕದವರಿಗೆ ಆಗುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ :- ನಾವು ಆದಷ್ಟು ಮಟ್ಟಿಗೆ ಕೈಗಾರಿಕೆಗಳನ್ನು ಬೆಂಗಳೂರಿನಿಂದ ದೂರಕ್ಕೆ ಕಳಿಸಬೇಕೆಂಬುದು ಸರಕಾರದ ನೀತಿಯಾಗಿದೆ. ಹಾಗಾಗಿ ನಮ್ಮ ಹೊಸ ಕೈಗಾರಿಕಾ ನೀತಿಯ ಪ್ರಕಾರ ಹಿಂದುಳಿದ ಪ್ರದೇಶದಲ್ಲಿ ಕೈಗಾರಿಕೆ ಬೆಳೆಯಬೇಕಾಗಿದೆ. ಚಿಕ್ಕಮಗಳೂರು, ಬಿಜಾಪುರ, ಬಳ್ಳಾರಿ, ನಿಪ್ಪಾಣಿ ಇಂತಹ ಹಲವಾರು ಮಿನಿ ಗ್ರೋತ್ ಸೆಂಟರ್ಸ್ ಡೆವಲಪ್ ಮಾಡಬೇಕೆಂದು ಕೈಗಾರಿಕಾ ನೀತಿಯಲ್ಲಿ ಹೇಳಿದ್ದೇನೆ. ಇವತ್ತು ಕೈಗಾರಿಕೆಗಳು ಬೆಂಗಳೂರಿನಿಂದ ದೂರ ಹೋಗಬೇಕು. ಶಿರಾಗೆ ಕೋಲಾರ ಕಡೆ ಹೋಗಬೇಕು. ಶಿರಾದಲ್ಲಿ ಕೂಡ ಇನ್‌ಫ್ರಾಸ್ಟ್ರಕ್ಚರ್‌ಅನ್ನು ನಾವು ಡೆವಲಪ್ ಮಾಡಬಹುದು ಆದರೆ ಕೈಗಾರಿಕೆಗಳು ಹೋಗಬೇಕಾದರೆ ಎಂಟರ್‌ಪ್ರೆನರ್ಸ್ ಮುಂದೆಬರಬೇಕು.

ನಾವು ಪರ್ಸ್ಯೂ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಇನ್‌ಫ್ರಾಸಟ್ರಕ್ಚರ್ ಡೆವಲಪ್ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ವಿಷಯ :- ಶಿಕಾರಿಪುರ ತಾಲ್ಲೂಕಿನಲ್ಲಿ ಅನುದಾನಿತ ವಸತಿ ನಿಲಯಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 212 (1306)

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) :- ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿಕಾರಿಪುರ ತಾಲ್ಲೂಕಿನಲ್ಲಿ ಒಟ್ಟು ಅನುದಾನಿತ ವಸತಿ ನಿಲಯಗಳ ಸಂಖ್ಯೆ ಎಷ್ಟು ಇವುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;

ಆ) ಕಳೆದ ವರ್ಷ ಈ ಅನುದಾನಿತ ವಿದ್ಯಾರ್ಥಿ ನಿಲಯಕ್ಕೆ ನೀಡಿದ ಒಟ್ಟು ಅನುದಾನ ಎಷ್ಟು?

ಶ್ರೀ ಮಾಲಿಕಯ್ಯ ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರಿಂದ ಅನುಮೋದಿಸಲ್ಪಟ್ಟಿದೆ.)

ಅ) ಶಿಕಾರಿಪುರ ತಾಲ್ಲೂಕಿನಲ್ಲಿ ಒಟ್ಟು ಎರಡು ಅನುದಾನಿತ ವಿದ್ಯಾರ್ಥಿ ನಿಲಯಗಳು, ಮತ್ತು ಒಂದು ಅನುದಾನಿತ ಅನಾಥಾಲಯವಿದ್ದು ಇವುಗಳ ವಿದ್ಯಾರ್ಥಿಗಳ ಸಂಖ್ಯೆ ಕ್ರಮವಾಗಿ 120 ಹಾಗೂ 106 ಇರುತ್ತದೆ.

ಆ) ಕಳೆದ ಸಾಲಿನಲ್ಲಿ ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯಗಳಿಗೆ ಮತ್ತು ಅನಾಥಾಲಯಕ್ಕೆ ಒಟ್ಟು ರೂ. 3,30,065-00 (ರೂಪಾಯಿ 2,61,542-00 ಖಾಸಗಿ ವಸತಿ ನಿಲಯಕ್ಕೆ ಮತ್ತು 68,523-00 ಅನಾಥಾಲಯಕ್ಕೆ) ಗಳನ್ನು ಅನುದಾನ ಮಂಜೂರು ಮಾಡಲಾಗಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಅನುದಾನಿತ ವಿದ್ಯಾರ್ಥಿನಿಲಯಗಳು ಮತ್ತು ಅನುದಾನಿತ ಅನಾಥಾಲಯಗಳ ಸಂಖ್ಯೆಗಳ ಬಗ್ಗೆ ತಾವು ಹೇಳಿದಿರಿ. ನಾನು ಕೇಳಿದಂತಹ ಉದ್ದೇಶವೇನೆಂದರೆ, ಒಬ್ಬ ಹುಡುಗನಿಗೆ ಅನುದಾನಿತ ವಿದ್ಯಾರ್ಥಿನಿಲಯ ಗಳಲ್ಲಿ 250 ರೂಪಾಯಿಕೊಡುತ್ತಿದ್ದು ಅನಾಥಾಲಯಕ್ಕೆ 100 ರೂಪಾಯಿ ಕೊಡುತ್ತಿದ್ದೀರಿ, ಇದರಿಂದ ಅವರಿಗೆ ಎಲ್ಲಿ ಸೌಲಭ್ಯವನ್ನು ಕೊಡುವುದಕ್ಕೆ ಸಾಧ್ಯವೇ ಎಂಬ ವಿಚಾರ ನನ್ನದು. ನನಗೆ ಗೊತ್ತಿರುವ ಎಸ್.ಸಿ./ಎಸ್.ಟಿ ಮಕ್ಕಳಿಗೆ ನಾವು 400 ರೂಪಾಯಿವರೆಗೆ ಕೊಡುತ್ತೇವೆ. ಅವರಿಗೂ ಆ ಏರಿಕೆಯನ್ನು ಮಾಡುವುದಕ್ಕೆ ಸರಕಾರವೇನಾದರೂ ಯೋಜನೆ ಮಾಡಿದೆಯೇ?

ಶ್ರೀ ಮಾಲೀಕಯ್ಯ ಗುತ್ತೇದಾರ್ :- ಮಾನ್ಯ ವಿರೋಧ ಪಕ್ಷದ ನಾಯಕರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಎಸ್.ಸಿ./ಎಸ್.ಟಿಯವರಿಗೆ 400 ರೂಪಾಯಿ ಕೊಡುತ್ತಿದ್ದು ಹಿಂದುಳಿದ ವರ್ಗದ ಮಕ್ಕಳಿಗೆ 250 ರೂಪಾಯಿ ಕೊಡುತ್ತಿದ್ದೀರಿ ಇದು ಬಹಳ ಕಡಿಮೆ ಇದೆ ಎಂದು ನಮ್ಮ ಗಮನಕ್ಕೆ ತಂದಿದ್ದಾರೆ. ಇದರ ಬಗ್ಗೆ ಅಧಿಕಾರಿ ಮಟ್ಟದಲ್ಲಿ ಸಭೆ ಮಾಡಿದ್ದೇವೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಿಕ್ಕೆ ಪರಿಶೀಲಿಸಿ ಯೋಗ್ಯವಾದ ಕಾರ್ಯಕ್ರಮವನ್ನು ರೂಪಿಸುತ್ತೇವೆ.

ಶ್ರೀ ಬಿ. ಎಸ್. ಯಡಯೂರಪ್ಪ :- ಮಕ್ಕಳಿಗೆ ಈ ಹಣದಿಂದ ಏನು ಸವಲತ್ತು ಕೊಡುತ್ತಿದ್ದೀರಿ?.

ಶ್ರೀ ಮಾಲೀಕಯ್ಯ ಗುತ್ತೇದಾರ್ :- ಖಾಸಗಿ ವಸತಿ ಶಾಲೆಗಳಿಗೆ ನಾವು ಹಣವನ್ನು ತಿಂಗಳಿಗೆ 200 ರೂಪಾಯಿ ಇದ್ದುದನ್ನು 250 ಮಾಡಿದ್ದೇವೆ. ಊಟ ಅಲ್ಲಿಗೆ ಬೇಕಾದಂತಹ ಸಾಮಗ್ರಿಗಳನ್ನು ಅದೂ ಖಾಸಗಿಯವರಿಗೆ ಕೊಡುತ್ತಿದ್ದೇವೆ. ಇನ್ನು ಇದೇ ರೀತಿ ಅನಾಥಾಲಯಗಳಿಗೆ 50 ರೂಪಾಯಿ ಇದ್ದುದನ್ನು ನೂರು ರೂಪಾಯಿ ಮಾಡಿ ದ್ದೇವೆ. ನೂರು ರೂಪಾಯಿಗೆ ಇನ್‌ಕ್ರೀಸ್ ಮಾಡಿ ಸೌಲಭ್ಯವನ್ನು ಒದಗಿಸಿದ್ದೇವೆ. ಖಾಸಗಿ ಯವರು ಏನು ಕೊಡುತ್ತಾರೋ ಅದನ್ನು ಅವರಿಗೆ ಬಿಟ್ಟಿದ್ದೇವೆ. ಒಂದು ವಿದ್ಯಾರ್ಥಿಗೆ ಇಷ್ಟು ಹಣ ಎಂದು ನಾವು ಕೊಡುತ್ತಿದ್ದೇವೆ. ಇವತ್ತು ನಮ್ಮ ಇಲಾಖೆಯಿಂದ, ಸರ್ಕಾರ ದಿಂದ ಏನು ನಡೆಸುತ್ತಿದ್ದೇವೆ. ಅಲ್ಲಿ ಎರಡು ಬೆಡ್ ಶೀಟ್ ಕೊಡುತ್ತಿದ್ದೇವೆ, ಆಮೇಲೆ ಒಂದು ಬೆಡ್, ಎರಡು ಜೋಡು ಬಟ್ಟೆ ಕೊಡುವ ಕಾರ್ಯಕ್ರಮ ಇದೆ. ಮತ್ತು ಒಳ್ಳೆಯ ಊಟವನ್ನು ಕೊಡುತ್ತಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೇ, ನಾನು ಹತ್ತಾರು ಕಡೆ ಹೋಗಿ ನೋಡಿಕೊಂಡು ಬಂದು ಈ ಪ್ರಶ್ನೆಯನ್ನು ನನ್ನ ತಾಲ್ಲೂಕಿಗೇ ಸೀಮಿತವಾಗಿ ಏಕೆ ಕೇಳಿದೆ ಎಂದರೆ ನಾನು ಹೋಗಿ ಬಂದಿದ್ದೇನೆ. ಈ ಅನಾಥಾಲಯಗಳು ಅನಾಥಾಲಯಗಳಾಗಿಯೇ ಉಳಿದಿವೆ. ಅಲ್ಲಿ ಏನೂ ಇಲ್ಲ. ಆ ಮಕ್ಕಳು ಅಲ್ಲಿರುವುದೇ ಇಲ್ಲ. ಅದು ಲೆಕ್ಕ ಮಾಡಿಕೊಂಡು ಅವನ್ಯಾರೋ ಒಬ್ಬ ದುಡ್ಡು ಡ್ರಾ ಮಾಡಿ ತಿನ್ನು ವಂಥದ್ದು. ಬಹುಶಃ ಇದನ್ನು ಹತ್ತು ಕಡೆ ಇನ್ಸ್‌ಪೆಕ್ಷನ್ ಮಾಡಿದರೆ ನಿಮಗೆ ಅದೇ ಅನುಭವಕ್ಕೆ ಬರಬಹುದು. ಮತ್ತು ಅವರನ್ನು ಕೇಳಿದರೆ ಕೊಡುವ ನೂರು ರೂಪಾಯಿ ಗಳಲ್ಲಿ ಏನು ಮಾಡುವುದು ಯಡಿಯೂರಪ್ಪನವರೇ ಎನ್ನುವ ಪ್ರಶ್ನೆಗೆ ಉತ್ತರವನ್ನು ಕೊಡುತ್ತಾರೆ. ಇಲ್ಲ ಇದನ್ನು ಮುಚ್ಚಿಬಿಡಿ. ಇಲ್ಲದಿದ್ದರೆ ಅಗತ್ಯವಿರುವ ಖರ್ಚು ಕೊಟ್ಟು ಅದೊಂದು ಒಳ್ಳೆಯ ರೀತಿಯಲ್ಲಿ ನಡೆಯುವ ಹಾಗೆ ಮಾಡಿ. ಮತ್ತು ಎಲ್ಲಿ ಇದನ್ನು ದುರಪಯೋಗ ಮಾಡಿಕೊಳ್ಳುತ್ತಿದ್ದಾರೆ, ನಿಮಗೆ ಹತ್ತಾರು ಉದಾಹರಣೆಯನ್ನು ನಾನು ಕೊಡಬಲ್ಲೆ. ತಾವು ಇನ್ಸ್‌ಪೆಕ್ಷನ್ ಮಾಡಿ. ಆ ರೀತಿ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಮ್ಯಾನೇಜ್‌ಮೆಂಟ್‌ನವರು, ಅವರ ಮೇಲೆ ಸೂಕ್ತವಾದ ಕ್ರಮ ತೆಗೆದುಕೊಳ್ಳಿ.

ಶ್ರೀ ಮಾಲೀಕಯ್ಯ ಗುತ್ತೇದಾರ್ :- ಮಾನ್ಯ ಸದಸ್ಯರ ಅಭಿಪ್ರಾಯಗಳನ್ನು ಪರಿಶೀಲಿಸಿ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ :- ದುರುಪಯೋಗವಾಗುತ್ತಿರುವುದು ನಿಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಮಾಲೀಕಯ್ಯ ಗುತ್ತೇದಾರ್ :- ಇಲ್ಲಿಯವರೆಗೂ ಬಂದಿಲ್ಲ. ಯಾವುದಾದರೂ ಒಂದು ದೂರು ನೀಡಿದರೆ ಸಂಬಂಧಿಸಿದವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು :- ಮಾನ್ಯ ವಿಶ್ವೇಶ್ವರ ಹೆಗಡೆಯವರೇ, ಮುಖ್ಯಮಂತ್ರಿಗಳು ಕರೆದಿರುವ ಸಭೆಯಲ್ಲಿ ಸಚಿವರು ಹೋಗಿರುತ್ತಾರೆ. ಬೇರೆ ಯಾರಾದರೂ ಸಚಿವರು ಉತ್ತರವನ್ನು ನೀಡುತ್ತೀರಾ? ಅವರು ನನ್ನ ಅನುಮತಿ ಪಡೆದುಕೊಂಡಿದ್ದಾರೆ. ಮುಖ್ಯ ಮಂತ್ರಿಗಳು ಕರೆದಿರುವ ಸಭೆಯಲ್ಲಿದ್ದಾರೆ. ಇದನ್ನು ಆಮೇಲೆ ತೆಗೆದುಕೊಳ್ಳೋಣ.

ಶ್ರೀ ಬಿ. ಎನ್. ಬಚ್ಚೇಗೌಡ :- ಮಾನ್ಯ ಎ. ರಾಮದಾಸ್‌ರವರ ಪ್ರಶ್ನೆಗೆ ಉತ್ತರ ಕೊಡುವುದು ಇದು ಮಾನ್ಯ ಖಿರಾಜುದ್ದೀನ್ ಪಟೇಲರಿಗೆ ಬರುತ್ತದೆ.

ಅಧ್ಯಕ್ಷರು :- ಇದು ಅವರಗೇ ಬರುತ್ತಾ ಸಿ.ಎಂ ಮೀಟಿಂಗ್ ಕರೆದಿದ್ದಾರೆ. ಮೊದಲೇ ಅದನ್ನು ಷೆಡ್ಯೂಲ್ ಮಾಡಿದ್ದರು. ನಿನ್ನೆ ಸಡನ್‌ಆಗಿ ತೀರ್ಮಾನ ತೆಗೆದು ಕೊಂಡರಲ್ಲಾ ಹತ್ತು ಗಂಟೆಗೆ ಇಂದು ಸಭೆ ಸೇರೋಣ ಎಂದು.

ಶ್ರೀ ಎ. ರಾಮದಾಸ್ :- ಮಾನ್ಯ ಅಧ್ಯಕ್ಷರೇ, ಇದು ಪೌರಾಡಳಿತ ಸಚಿವರಿಗೆ ಬರುವುದಿಲ್ಲ. ನಗರಾಭಿವೃದ್ಧಿ ಸಚಿವರಿಗೇ ಬರಬೇಕು. ಏಕೆಂದರೆ ನಗರಪಾಲಿಕೆಗೆ ಸೇರಿದಂಥ ಒಂದು ಸಮಸ್ಯೆಯಾದುದರಿಂದ ಅದರ ವ್ಯಾಪ್ತಿಯಲ್ಲಿ ಬರುವುದರಿಂದ ಹೇಗೆ ಪೌರಾಡಳಿತ ಸಚಿವರಿಗೆ ಇದನ್ನು ಹಾಕಿದರು ಎಂದು ನನಗೆ ಅರ್ಥವಾಗುತ್ತಾ ಇಲ್ಲ.

ಶ್ರೀ ಬಿ. ಎನ್. ಬಚ್ಚೇಗೌಡ :- ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರ ಕಾರ್ಪೊರೇಷನ್ ಹೊರತುಪಡಿಸಿ ಇರುವ ಮಹಾನಗರಪಾಲಿಕೆ, ನಗರಸಭೆಗಳು ಮತ್ತು ಪುರಸಭೆ ಎಲ್ಲಾ ಅವರಿಗೇ ಬರುತ್ತದೆ. ಮಿರಾಜುದ್ದೀನ್ ಪಟೇಲರು ಪೌರಾಡಳಿತ ಸಚಿವರು ಇದುವರಿಗೆ ಬರುತ್ತದೆ.

ವಿಷಯ :- ಸಕಲೇಶಪುರ ನಗರಕ್ಕೆ ಕುಡಿಯುವ ನೀರಿನ ಸೌಲಭ್ಯ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 214 (1313)

ಶ್ರೀ ಬಿ. ಬಿ. ಶಿವಪ್ಪ (ಸಕಲೇಶಪುರ) :- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಕಲೇಶಪುರ ಪಟ್ಟಣಕ್ಕೆ ಕುಡಿಯುವ ನೀರಿನ ಸೌಲಭ್ಯಕ್ಕಾಗಿ ಈ ಹಿಂದೆ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು 45 ಲಕ್ಷ ರೂಪಾಯಿ ಅಂದಾಜು ತಯಾರಿಸುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ವಿಷಯವು ಕಾರ್ಯಗತವಾಗದೆ ಇರಲು ಕಾರಣವೇನು. ಹಾಗೂ ಈ ಕೆಲಸ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಬಿ. ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :-

ಅ) ಬಂದಿದೆ.

ಆ) ಸಕಲೇಶಪುರ ಬಾಳೆಗದ್ದೆ ನೀರು ಸರಬರಾಜು ಯೋಜನೆಗೆ ಸರ್ಕಾರವು ರೂ.18.0 ಲಕ್ಷಗಳ ಅಂದಾಜಿಗೆ ದಿನಾಂಕ : 24-6-1985 ರಲ್ಲಿ ಆನುಮೋದನೆ ನೀಡಿದ್ದು ಅಂದಾಜಿನಂತೆ ಎಲ್ಲಾ ಕಾಮಗಾರಿಗಳನ್ನು ಕಾರ್ಯಗತಗೊಳಿಸಲಾಗಿದ್ದು, ದಿನಾಂಕ : 14-2-95 ರಂದು ಪುರಸಭೆಗೆ ಹಸ್ತಾಂತರಿಸಲಾಗಿದೆ. ಯೋಜನೆಗೆ ಇದುವರಿಗೆ ರೂ.30.58 ಲಕ್ಷಗಳು ಖರ್ಚಾಗಿರುತ್ತದೆ. ಈ ಯೋಜನೆಗೆ ರೂ. 44.96 ಲಕ್ಷಗಳ ಪರಿಷ್ಕೃತ ಅಂದಾಜು ತಯಾರಿಸಿದ್ದು ಇತರೆ ಕೆಲಸಗಳಾದ ಇದರಡಿಯಲ್ಲಿ 30,000 ಗ್ಯಾಲನ್ ಜಲಸಂಗ್ರಹಾಗಾರದಿಂದ ವಿಸ್ತರಣಾ ವ್ಯವಸ್ಥೆ ಮತ್ತು ಇತರೆ ಕೆಲಸಗಳನ್ನು ಕೈಗೊಳ್ಳುವ ಬಗ್ಗೆ ಅವಕಾಶ ಕಲ್ಪಿಸಲಾಗಿದೆ.

ಶ್ರೀ ಬಿ. ಬಿ. ಶಿವಪ್ಪ :- ಮಾನ್ಯ ಅಧ್ಯಕ್ಷರೇ, ಉತ್ತರಗಳನ್ನು ಒದಗಿಸಲಾಗಿದೆ ಎಂದು ಹೇಳಿ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಉತ್ತರ ಬಂದಿದೆ. ಕುಡಿಯುವ ನೀರಿನ ತೊಂದರೆ ಇದೆ ಎನ್ನುವುದನ್ನು ಒಪ್ಪಿಕೊಂಡಿದ್ದಾರೆ. ನಂತರ ಇದಕ್ಕೆ 18 ಲಕ್ಷ ರೂಪಾಯಿ ಅಂದಾಜು ಮಾಡಿ 24-6-85 ರಲ್ಲಿ ಕೆಲಸವನ್ನು ತೀರಿಸಿ ಸುಮಾರು 30.58 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ 14-2-96 ರಲ್ಲಿ ಮುನಿಸಿಪಾಲಿಟಿಗೆ ವಹಿಸಿದೆ ಎಂದು ತಾವು ಇಲ್ಲಿ ಕಾಣಿಸಿದ್ದೀರಿ. ಮತ್ತು ಅದಲ್ಲದೆ 44-96 ಲಕ್ಷಗಳ ಪರಿಷ್ಕೃತ ಅಂದಾಜು